ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಕಾಮಗಾರಿಗಳ ಬಗ್ಗೆ ಟೆಂಡರ್‌ಗಳನ್ನು ಕರೆಯಲಾಗಿದ್ದು, ಈ ಟೆಂಡರ್‌ಗಳ ಸ್ವೀಕೃತಿಯ ಕೊನೆಯ ದಿನಾಂಕ : 14-2-2005 ಆಗಿರುತ್ತದೆ.

ಇ) ಈ ಯೋಜನೆಯ ಅಂದಾಜು ವೆಚ್ಚ ರೂ. 340.55 ಕೋಟಿಗಳು.

ಈ) ಕಾಮಗಾರಿಗಳನ್ನು ಮಾರ್ಚ್, ಏಪ್ರಿಲ್, 2005 ಅವಧಿಯೊಳಗೆ ಪ್ರಾರಂಭ ಮಾಡಲು ಉದ್ದೇಶಿಸಲಾಗಿದೆ.

906(178) ಶ್ರೀ ಅಶೋಕ್ ಆರ್.(ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಾಗರಭಾವಿಯಲ್ಲಿರುವ ವಿನಾಯಕ ಸೊಸೈಟಿ ಬಡಾವಣೆಗೆ ನಕ್ಷೆಯನ್ನು ಎರಡು ಬಾರಿ ಮಂಜೂರು ಮಾಡಲಾಗಿದೆಯೇ ;

ಆ) ನಕ್ಷೆ ಮಂಜೂರಾತಿಯಿಂದ ನಾಗರೀಕ ಸೌಕರ್ಯಕ್ಕಾಗಿರುವ (ಸಿವಿಕ್ ಅಮಿನೀಟಿಸ್) ಜಾಗವನ್ನು ಬಡಾವಣೆಗಳಾಗಿ ನಿರ್ಮಾಣ ಮಾಡಿರುವಂತದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ಅಕ್ರಮವನ್ನು ಸರಿಪಡಿಸಲು ಕೈಗೊಂಡ ಕಾನೂನು ಕ್ರಮವೇನು ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಹೌದು.

ಆ) ಬಂದಿದೆ.

ಇ) ಡಬ್ಲ್ಯೂ.ಪಿ.ಸಂಖ್ಯೆ : 31575/2003 ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಬಾಕಿ ಇರುತ್ತದೆ. ನ್ಯಾಯಾಲಯದ ಮಧ್ಯಂತರ ತೀರ್ಪಿನ ಅನ್ವಯ 2003ರಲ್ಲಿ ಅನುಮತಿಸಲಾಗಿದ್ದು, ಮಾರ್ಪಡಿತ ಬಡಾವಣೆ ನಕ್ಷೆಯನ್ನು ರದ್ದುಪಡಿಸಲಾಗಿರುತ್ತದೆ. 1992ರಲ್ಲಿ ಅನುಮೋದಿಸಿರುವ ಬಡಾವಣೆ ನಕ್ಷೆಯಲ್ಲಿ ಸಿ.ಎ. ಮತ್ತು ಉದ್ಯಾನವನಕ್ಕೆ ಮೀಸಲಾಗಿಟ್ಟಿರುವ ಪ್ರದೇಶಗಳಲ್ಲಿ ಯಾವುದೇ ಕಟ್ಟಡಗಳಿಗೆ ಅನುಮತಿ ನೀಡಬಾರದೆಂದು ಶ್ರೀ ರಾಜರಾಜೇಶ್ವರಿ ನಗರಸಭೆಗೆ ತಿಳಿಸಲಾಗಿರುತ್ತದೆ. 1992ರಲ್ಲಿ ಅನುಮೋದಿಸಿರುವ ಬಡಾವಣೆ ನಕ್ಷೆಯನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಸಂಘದ ವಿರುದ್ಧ ಕ್ರಮ ಜರುಗಿಸಲಾಗಿದೆ.

907(1176) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾ ಅಣೆಕಟ್ಟು ವ್ಯಾಪ್ತಿಯಲ್ಲಿ ಖಾಸಗಿಯವರಿಂದ ವಿದ್ಯುತ್ ಉತ್ಪಾದನೆ ಮಾಡಲು ಅನುಮತಿ ನೀಡಲಾಗಿದೆಯೇ ನೀಡಿದ್ದರೆ ಯಾವ ಖಾಸಗಿ ಕಂಪನಿಗೆ ಅನುಮತಿ ನೀಡಲಾಗಿದೆ ;

ಆ) ಈ ವಿದ್ಯುತ್ ಉದ್ಪಾದನೆ ಯೋಜನೆಯಿಂದ ಪರಿಸರಕ್ಕೆ ಹಾಗೂ ಅಣೆಕಟ್ಟೆಗೆ ಹಾನಿಯಾಗುವ ಬಗ್ಗೆ ಅಂದಾಜು ಮಾಡಲಾಗಿದೆಯೇ ;

ಇ) ಹಾಗಿದ್ದಲ್ಲಿ, ಇದರ ನಿವಾರಣೆಗೆ ಕೈಗೊಂಡ ಮುಂಜಾಗ್ರತಾ ಕ್ರಮಗಳೇನು ?